# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **311** |
| **ಮಾನ್ಯ ಸದಸ್ಯರ ಹೆಸರು** | ಶ್ರೀ ಸಿ.ಎನ್. ಮಂಜೇಗೌಡ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | 21.12.2022 |
| **ಉತ್ತರಿಸುವ ಸಚಿವರು** | ವಸತಿ ಮತ್ತು ಮೂಲಸೌಲಭ್ಯ<br>ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಚಾಮರಾಜನಗರ ಮತ್ತು ಮೈಸೂರು ಜಿಲ್ಲೆಗಳ ಯಾವ-ಯಾವ ಸ್ಥಳಗಳಲ್ಲಿ ಗೃಹ ಮಂಡಳಿ ವತಿಯಿಂದ ಹೊಸದಾಗಿ ಬಡಾವಣೆಗಳನ್ನು ನಿರ್ಮಿಸಲು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. (ವಿವರ ನೀಡುವುದು) | • ಚಾಮರಾಜನಗರ ಜಿಲ್ಲೆ, ಹನೂರು ತಾಲ್ಲೂಕು, ಲೊಕ್ಕನಹಳ್ಳಿ ಹೋಬಳಿ, ಕಣ್ಣೂರು ಮತ್ತು ಆನಾಪುರ ಗ್ರಾಮಗಳ ವ್ಯಾಪ್ತಿಯಲ್ಲಿ ಶೇ. 60:40 ರ ಅನುಪಾತದ ಪಾಲುದಾರಿಕೆಯಡಿ ಒಟ್ಟು 86.20 ಎಕರೆ ಜಮೀನಿನಲ್ಲಿ ವಸತಿ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.<br>• ಸದರಿ ವಸತಿ ಯೋಜನೆಯ ಡಿ.ಪಿ.ಆರ್ ತಯಾರಿಸಿ, ಟೆಂಡರ್ ಪ್ರಕ್ರಿಯೆ ಕೈಗೊಂಡು, ಟೆಂಡರ್‌ಗೆ ಸರ್ಕಾರದಿಂದ ಅನುಮೋದನೆ ನೀಡಲಾಗಿದ್ದು, ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿದೆ.<br>• ಚಾಮರಾಜನಗರ ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿಯ ಮಾದಾಪುರ ಮತ್ತು ಕಿರಗಸೂರು ಗ್ರಾಮಗಳಲ್ಲಿ ಅನುಪಾತದ ಪಾಲುದಾರಿಕೆಯಡಿ ವಸತಿ ಯೋಜನೆಯನ್ನು ಕೈಗೊಳ್ಳಲು ಭೂಮಾಲೀಕರುಗಳಿಂದ ಜಮೀನು ಸಂಗ್ರಹಿಸಲು ಕ್ರಮ ವಹಿಸಲಾಗುತ್ತಿದೆ. 30 ಎಕರೆಗೆ ಭೂಮಾಲೀಕರು ಅನುಪಾತದ ಪಾಲುದಾರಿಕೆಗೆ ಒಪ್ಪಿಗೆ ಪತ್ರ ಸಲ್ಲಿಸಿರುತ್ತಾರೆ. ಕಾಂಪ್ಯಾಕ್ಟ್ ಇರುವ ಸುಮಾರು 50 ಎಕರೆ ವಿಸ್ತೀರ್ಣಕ್ಕೆ ಒಪ್ಪಿಗೆ ಪತ್ರ ಸ್ವೀಕಾರವಾದ ಕೂಡಲೇ ವಸತಿ ಯೋಜನೆ ಕೈಗೊಳ್ಳಲು ಕ್ರಮ ವಹಿಸಲಾಗುವುದು.<br>• ಮೈಸೂರು ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿ ವತಿಯಿಂದ ಹೊಸದಾಗಿ ಯಾವುದೇ ಬಡಾವಣೆಗಳನ್ನು ನಿರ್ಮಿಸುತ್ತಿಲ್ಲ. |
| ಆ | ಹಾಗಿದ್ದಲ್ಲಿ ಈ ಹೊಸ ಬಡಾವಣೆಗಳನ್ನು ನಿರ್ಮಿಸಲು ಈಗಾಗಲೇ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡಲಾಗಿದೆಯೇ? (ವಿವರ ನೀಡುವುದು) | |
| ಇ | ಈ ಹೊಸ ಬಡಾವಣೆಗಳನ್ನು ನಿರ್ಮಿಸುವ ಸಲುವಾಗಿ ಈಗಾಗಲೇ ಡಿ.ಪಿ.ಆರ್ ವರದಿಯನ್ನು ತಯಾರಿಸಿ ಅದಕ್ಕೆ ಸರ್ಕಾರದ ಅನುಮೋದನೆಯಾಗಿದೆಯೇ? | |
| ಈ | ಈ ಹೊಸ ಬಡಾವಣೆಗಳನ್ನು ನಿರ್ಮಿಸುವ ಸಲುವಾಗಿ ಅಂದಾಜು ಎಷ್ಟು ಮೊತ್ತವನ್ನು ಖರ್ಚು ಮಾಡಿ ಎಷ್ಟು ನಿವೇಶನಗಳನ್ನು ರಚನೆ ಮಾಡುವ ಉದ್ದೇಶವಿದೆ? (ಮಾಹಿತಿ ಒದಗಿಸುವುದು) | ಹನೂರು ತಾಲ್ಲೂಕು, ಲೊಕ್ಕನಹಳ್ಳಿ ಹೋಬಳಿ, ಕಣ್ಣೂರು ಮತ್ತು ಆನಾಪುರ ಗ್ರಾಮಗಳ ವ್ಯಾಪ್ತಿಯ ಒಟ್ಟು 86.20 ಎಕರೆ ಜಮೀನಿನಲ್ಲಿ ರೂ. 8456.05 ಲಕ್ಷಗಳ ಯೋಜನಾ ಮೊತ್ತ ಮತ್ತು ರೂ. 4743.44 ಲಕ್ಷಗಳ ಗುತ್ತಿಗೆ ಮೊತ್ತದಲ್ಲಿ ವಸತಿ ಯೋಜನೆಯನ್ನು ಕೈಗೊಳ್ಳಲಾಗುತ್ತಿದ್ದು, ಈಗಾಗಲೇ ರೂ. 3972.00 ಲಕ್ಷಗಳ ಮೊತ್ತವನ್ನು ವೆಚ್ಚ ಮಾಡಲಾಗಿದೆ. ಸದರಿ ಯೋಜನೆಯಲ್ಲಿ ವಿವಿಧ ವರ್ಗದ 1325 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. |

**(ಸಂಖ್ಯೆ: ವಇ 237 ಕಗೃಮಂ 2022)**

**(ವಿ. ಸೋಮಣ್ಣ)**
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು.